ಸಂಖ್ಯೆ. ಇಡಿ/ಕೆಇಎ/01/ಕೆಸೆಟ್-26/2026-27 ದಿನಾಂಕ: 26.11.2026

ಕರ್ನಾಟಕ ರಾಜ್ಯ ಅರ್ಹತಾ ಪರೀಕ್ಷೆ (ಕೆ-ಸೆಟ್) 2026ರ ತಾತ್ಕಾಲಿಕ ಫಲಿತಾಂಶ ಪ್ರಕಟಣೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) 11ನೇ ಅಕ್ಟೋಬರ್ 2026 ರಂದು ನಡೆಸಲಾದ ಎಲ್ಲಾ 37 ವಿಷಯಗಳ ಕರ್ನಾಟಕ ರಾಜ್ಯ ಅರ್ಹತಾ ಪರೀಕ್ಷೆಯ (ಕೆ-ಸೆಟ್) ತಾತ್ಕಾಲಿಕ ಫಲಿತಾಂಶವನ್ನು 20.11.2026 ರಂದು ಪ್ರಕಟಿಸಲಾಗಿತ್ತು. ತದನಂತರ SCC(MB) ಪ್ರವರ್ಗಕ್ಕೆ ಸೇರಿದ ಕೆಲವೊಂದು ಅಭ್ಯರ್ಥಿಗಳು ತಾತ್ಕಾಲಿಕ ಆಯ್ಕೆ ಫಲಿತಾಂಶಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಿ ತಮಗೆ ಸೇರಬೇಕಾದ ಸ್ಲಾಟ್‌ಗಳನ್ನು ತಮಗೆ ಬದಲಾಗಿ, SCC(G) ಅಭ್ಯರ್ಥಿಗಳಿಗೆ ಹಂಚಿಕೆ ಮಾಡಲಾಗಿದೆ ಎಂದು ಆಕ್ಷೇಪಿಸಿದ್ದರು. ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕ ದೋಷದಿಂದ ಕೆಲವು SCC(MB) ಸ್ಲಾಟ್‌ಗಳು SCC(MB) ಅಭ್ಯರ್ಥಿಗಳಿಗೆ ಬದಲಾಗಿ SCC(G) ಅಭ್ಯರ್ಥಿಗಳಿಗೆ ಹಂಚಿಕೆಯಾಗಿರುವುದು ಕಂಡುಬಂದಿದ್ದು, ಅದನ್ನು ಸರಿಪಡಿಸಿ, SCC(MB) ಪ್ರವರ್ಗದ ಸ್ಲಾಟ್‌ಗಳನ್ನು ಅರ್ಹವಿರುವ SCC(MB) ಅಭ್ಯರ್ಥಿಗಳಿಗೇ ಮರುಹಂಚಿಕೆ ಮಾಡಿ ಪರಿಷ್ಕೃತ ತಾತ್ಕಾಲಿಕ ಫಲಿತಾಂಶ ಪಟ್ಟಿಯನ್ನು ಸಿದ್ಧಪಡಿಸಿದ್ದು ವಿಷಯವಾರು ಪರಿಷ್ಕೃತ ಪಟ್ಟಿಯ ವಿವರ ಈ ಕೆಳಕಂಡಂತಿದೆ.

ಸೂಚನೆ: ಉಳಿದಂತೆ, SCC(G) ಮತ್ತು SCC(MB) ಹೊರತುಪಡಿಸಿ, ಸಂಖ್ಯೆ:ಇಡಿ/ಕೆಇಎ/01/ಕೆಸೆಟ್-26/2026-27, ದಿನಾಂಕ:20.11.2026 ರಂದು ಪ್ರಕಟಿಸಿದ ಇನ್ನುಳಿದ ಯಾವುದೇ ಪ್ರವರ್ಗವಾರು ಫಲಿತಾಂಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

(ಪ್ರಸನ್ನ ಎಚ್., ಭಾ.ಆ.ಸೇ)
ಕಾರ್ಯನಿರ್ವಾಹಕ ನಿರ್ದೇಶಕರು, ಕೆಇಎ